THE KARNATAKA MOTOR VEHICLES TAXATION (AMENDMENT) BILL, 1983.

Leave to introduce

MR. DEPUTY SPEAKER.—I will read the recommendation of the Governor.

"In pursuance of the clauses (1) and (3) of Article 207 of the Constitution, I, Govind Narain, Governor of Karnataka, do hereby recommend that the Karnataka Motor Vehicles Taxation (Amendment) Bill, 1983 be introduced in and considered by the Karnataka Legislative Assembly".

ರಾಜ್ಯಪಾಲರ ಇಸವಿಯ ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ. ಮಾನ್ಯ ಮಂತ್ರಿಯಂವರು ಪ್ರಸ್ತಾವನ್ನು ಮಂಡಿಸಬೇಕು.

ಶ್ರೀ ವಿ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) — ಮಾನ್ಯ ಉಪಾಧ್ಯಕ್ಷರೆ, ಈ ಕೆಳಗೆ ಕಂಡ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ. ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ರಾಜ್ಯಪಾಲ.

ಉಪಾಧ್ಯಕ್ಷರು.—ಪ್ರಸ್ತಾವನೆ ಏನೆಂದರೆ

"ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ರಾಜ್ಯಪಾಲ ಮಂಡಿಸಲು ಸಭೆಯು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟು ಅನುಮತಿ ನೀಡಲಾಯಿತು.

ಮಾನ್ಯ ಮಂತ್ರಿಯವರು ಈಗ ದನುವಿಟ್ಟು ವಿಧೇಯಕವನ್ನು ಸಭೆಯ ಮುಂದೆ ಮಂಡಿಸಬೇಕು.

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ರಾಜ್ಯಪಾಲನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.—ವಿಧೇಯಕವು ಮಂಡಿಸಲಾಗಿದೆ.*

THE KARNATAKA FOREST (AMENDMENT) BILL, 1983

Leave to Introduce

2-00 P.M.

MR. DEPUTY SPEAKER.—I will read the recommendation of the Governor "In pursuance of Clauses 1 and 3 of Article 207 of the Constitution of India, I, Govind Narain, Governor of Karnataka, do hereby recommend that the Karnataka Forest (Amendment) Bill, 1983, be introduced in and considered by the Karnataka Legislative Assembly."

* Annexure.

ಈಗ, ಕರ್ನಾಟಕ ರಾಜ್ಯ ಅರಣ್ಯ (ತಿದ್ದುಪಡಿ) ವಿಧೇಯಕ-೧೯೮೩ನ್ನು ಮಾನ್ಯ ಮಂತ್ರಿಗಳು ಮಂಡಿಸಬಹುದು.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಇಲಾಖಾ ರಾಜ್ಯ ಮಂತ್ರಿಗಳು).-ಈ ಕೆಳಗೆ ಕಂಡ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿಯನ್ನು ಕೋರುತ್ತೇನೆ.

ಕರ್ನಾಟಕ ರಾಜ್ಯ ಅರಣ್ಯ (ತಿದ್ದುಪಡಿ) ವಿಧೇಯಕ-೧೯೮೩

ಉಪಾಧ್ಯಕ್ಷರು.—ಪ್ರಸ್ತಾವನೇನೆಂದರೆ,

"ಕರ್ನಾಟಕ ರಾಜ್ಯ ಅರಣ್ಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು".

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು, ಅನುಮತಿ ನೀಡಲಾಯಿತು.

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಕರ್ನಾಟಕ ರಾಜ್ಯ ಅರಣ್ಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯ ಮುಂದೆ ಮಂಡಿಸುತ್ತೇನೆ,

ಉಪಾಧ್ಯಕ್ಷರು.—ಕರ್ನಾಟಕ ರಾಜ್ಯ ಅರಣ್ಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೮೩ ಪರಿಶೀಲನಾ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಉಪಾಧ್ಯಕ್ಷರೇ,—ಈ ಕೆಳಗೆ ಕಂಡ ಪ್ರಸ್ತಾವನ್ನು ಮಂಡಿಸುತ್ತೇನೆ.

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಪ್ರಸ್ತಾವನ್ನು ಸಭೆಯ ಮುಂದಿಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಸರಳವಾದ ತಿದ್ದುಪಡಿ ಇದೆ. ಇದರ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ಸಾಕಷ್ಟು ವಿಚಾರವನ್ನು ಸದಸ್ಯರು ವ್ಯಕ್ತಪಡಿಸಿದ್ದಾರೆ. ಮಾರಾಟ ತೆರಿಗೆ ಸಂಬಂಧದಲ್ಲಿ ಕೆಲವು ರಿಯಾಯಿತಿಗಳನ್ನು ಕೊಟ್ಟಿರತಕ್ಕ ವಿಚಾರವನ್ನು ಕೂಡಾ ಆಯವ್ಯಯ ಪಟ್ಟಿಯಲ್ಲಿ ಸೂಚಿಸಲಾಗಿದೆ. ಆದುದರಿಂದ ಈ ವಿಧೇಯಕವನ್ನು ಸಭೆ ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ಆಚಾರ್.—ಅಧ್ಯಕ್ಷರೇ ನಾನು ನಿನ್ನೆ ದೊಡ್ಡಬಳ್ಳಾಪುರಕ್ಕೆ ಹೋಗಿದೆ. ಅಲ್ಲಿ ಅನೇಕ ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳು ಇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಈ ಮಗ್ಗಗಳ ಮೇಲೆ ಕೆಲವು ರಿಯಾಯಿತಿಗಳನ್ನು ಕೊಟ್ಟಿರುವುದಾಗಿ ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಕೈ ಮಗ್ಗಗಳು ಇರುವವರಿಗೆ ಉತ್ಪಾದನೆ ಮಾಡತಕ್ಕ ಯಾವುದೇ ಬಟ್ಟೆ ಮೇಲೆ ಮಾರಾಟ ತೆರಿಗೆಯನ್ನು ಹಾಕುವುದಿಲ್ಲವೆಂದು ಹೇಳಿದ್ದಾರೆಂದು ತಿಳಿದಿದ್ದೇನೆ. ದೇಶದ ಉತ್ಪತ್ತಿಯಲ್ಲಿ ಕೇವಲ ಶೇಕಡಾ ೩೦ ರಷ್ಟು ಮಾತ್ರ ನಮ್ಮ ರಾಜ್ಯದ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಲ್ಲಿ ನೂಲನ್ನು ಉಪಯೋಗ ಮಾಡಿಕೊಳ್ಳಲಾಗುತ್ತಿದೆ. ನಮ್ಮ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ.

"ಕೈಮಗ್ಗ ಮತ್ತು ವಿದ್ಯುತ್ ಮಗ್ಗದಿಂದ ನೇಯ್ದ ರೇಷ್ಮೆ ಬಟ್ಟೆಗಳಿಗೆ ಶೇಕಡಾ ೨ ರಂತೆ ಏಕರೂಪ ದರದ ತೆರಿಗೆ ವಿಧಿಸಲು ಮತ್ತು ತೆರಿಗೆ ವಿಧಿಸುವ ಈ ಹಂತವನ್ನು ರಾಜ್ಯದೊಳಗೆ ತೆರಿಗೆಗೆ ಗುರಿಯಾಗುವ ಮಾರಾಟದ ಕೊನೆಯ ಹಂತಕ್ಕೆ ವರ್ಗಾಯಿಸಲು ಉದ್ದೇಶಿಸಲಾಗಿದೆ"